# ರಂಗನಾಥ ಶರ್ಮ: 'ಸಂಸ್ಕೃತಿಯ ಸಾಕಾರರೂಪ'

ಬೆಂಗಳೂರು, ಏ. ರಾಮಾಯಣ, ಮಹಾಭಾರತವೂ ಸೇರಿದಂತೆ ಸಂಸ್ಕೃತದ ಜ್ಞಾನಭಂಡಾರವನ್ನು ಕನ್ನಡಕ್ಕೆ ತಂದ ಪ್ರಸಿದ್ಧ ಸಂಸ್ಕೃತ ವಿದ್ವಾಂಸ ಎನ್. ರಂಗನಾಥ ಶರ್ಮ ಅವರನ್ನು ಇಂದು ಸಂಜೆ ನಗರದಲ್ಲಿ ನಡೆದ ಸಮಾರಂಭದಲ್ಲಿ ಸನ್ಮಾನಿಸಲಾಯಿತು.

ಕನ್ನಡ, ಸಂಸ್ಕೃತ ವಿದ್ವಾಂಸರು, ಸಾಹಿತ್ಯ ಪ್ರಿಯರ ಸಮ್ಮುಖದಲ್ಲಿ ನಡೆದ ಸಡಗರದ ಸಮಾರಂಭದಲ್ಲಿ ಸುಪ್ರೀಂಕೋರ್ಟಿನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಹಾಗೂ ಕೇಂದ್ರೀಯ ಸಂಸ್ಕೃತ ಪರಿಷತ್‌ನ ಅಧ್ಯಕ್ಷ ರಂಗನಾಥ ಮಿಶ್ರ ಅವರು, ಶರ್ಮರಿಗೆ ಫಲ ತಾಂಬೂಲವಿತ್ತು, ಶಾಲು ಹೊದಿಸಿ ಅಭಿನಂದಿಸಿದರು.

ದೇಶದಲ್ಲಿ ಈಗ ಅಪಾಯದಲ್ಲಿರುವ ಜೀವಿ ಸಂಕುಲ ಸಂಸ್ಕೃತ ಪಂಡಿತರದು. ಪ್ರಾಣಿಗಳ ಬಗ್ಗೆ ಅಪಾರ ಕಾಳಜಿ ತೋರುವ ನಾವು ನಮ್ಮ ಬದುಕನ್ನು ಶ್ರೀಮಂತಗೊಳಿಸುವ ವಿದ್ವನ್ಮಣಿಗಳ ಬಗ್ಗೆ ನಿರ್ಲಕ್ಷ್ಯ ತೋರುತ್ತಿರುವುದು ವಿಪರ್ಯಾಸ ಎಂದು ಅವರು ಸಂಸ್ಕೃತ ವಿದ್ವಾಂಸರ ಸಂಖ್ಯೆ ದಿನೇ ದಿನೇ ಕುಗ್ಗುತ್ತಿರುವ ಬಗ್ಗೆ ವಿಷಾದ ವ್ಯಕ್ತಪಡಿಸಿದರು.

ಧರ್ಮ, ಸಂಸ್ಕೃತಿ ಹಾಗೂ ಸಂಸ್ಕೃತ ಭಾಷೆಗಳೇ ಭಾರತದ ಶ್ರೀಮಂತಿಕೆ. ನಮ್ಮ ಜೀವನ ಮೌಲ್ಯಗಳು ಇವನ್ನು ಆಧರಿಸಿಯೇ ಬೆಳೆದವು. ರಂಗನಾಥ ಶರ್ಮರು ಈ ಸಂಸ್ಕೃತಿಯ ಸಾಕಾರ ರೂಪ. ಅವರನ್ನು ಗೌರವಿಸುವ ಮೂಲಕ ಭಾರತೀಯ ಸಂಸ್ಕೃತಿಯನ್ನೇ ಅಭಿನಂದಿಸಿದಂತೆ ಆಗಿದೆ ಎಂದು ಅಭಿನಂದನಾ ಭಾಷಣ ಮಾಡಿದ ನಿವೃತ್ತ ನ್ಯಾಯಮೂರ್ತಿ ರಾಮಾಜೋಯಿಸ್ ಮನದುಂಬಿ ನುಡಿದರು.

ಉನ್ನತ ಪರಂಪರೆಯುಳ್ಳ ಬೆಂಗಳೂರು ಸಂಸ್ಕೃತ ಕಾಲೇಜು ಈಗ ಹೀನ ಸ್ಥಿತಿಯಲ್ಲಿದೆ. ಕಟ್ಟಡದ ಒಳಗೆಲ್ಲಾ ಮುಳ್ಳು ಗಿಡಗಂಟಿ ಬೆಳೆದಿವೆ. ಸರ್ಕಾರ ಹಾಗೂ ಸಂಸ್ಕೃತ ಪ್ರಿಯರು ಇತ್ತ ಗಮನ ಹರಿಸಿ ಕಾಲೇಜಿನ ಸ್ಥಿತಿ ಸುಧಾರಿಸಬೇಕು ಎಂದು ಅಭಿನಂದನಾ ಭಾಷಣ ಮಾಡಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ. ನಾರಾಯಣ ಒತ್ತಾಯಿಸಿದರು.

ಕನ್ನಡ ಹಾಗೂ ಸಂಸ್ಕೃತ ಸಾಹಿತ್ಯಕ್ಕೆ ಶರ್ಮ ಅವರು ನೀಡಿದ ಕೊಡುಗೆಯನ್ನು ಶ್ಲಾಘಿಸಿದ ನಾರಾಯಣ, ಕೃಷ್ಣರಾಜ ವಾಣಿವಿಲಾಸ ಮಹಾಭಾರತವನ್ನು ಕನ್ನಡಕ್ಕೆ ಅನುವಾದಿಸುವಂತೆ ಶರ್ಮರನ್ನು ವಿನಂತಿಸಿದರು.

ನಿವೃತ್ತ ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾವ್ ಅವರೂ ಶರ್ಮರ ಕೊಡುಗೆಯನ್ನು ಸ್ಮರಿಸಿದರು. ತಮಗೆ ಸಂದ ಸನ್ಮಾನಕ್ಕೆ ರಂಗನಾಥ ಶರ್ಮ ಅವರು ಕೃತಜ್ಞತೆ ಸಲ್ಲಿಸಿದರು. 'ರಂಗಾಭಿನಂದನ' ಕನ್ನಡ ಗ್ರಂಥವನ್ನು ಡಾ. ಹಾ.ಮಾ. ನಾಯಕರು, 'ರಂಗಾಭಿನಂದನಂ' ಸಂಸ್ಕೃತ ಗ್ರಂಥವನ್ನು ವಿದ್ವಾನ್ ಮಂಡನ ಮಿಶ್ರ ಅವರು ಬಿಡುಗಡೆ ಮಾಡಿದರು.

ಸ್ವಾಗತ ಸಮಿತಿಯ ಅಧ್ಯಕ್ಷ, ಸುಪ್ರೀಂಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಇ.ಎಸ್. ವೆಂಕಟರಾಮಯ್ಯ ಸ್ವಾಗತಿಸಿದರು. ಬೆಳಿಗ್ಗೆ ನಡೆದ ವಿದ್ವತ್‌ಗೋಷ್ಠಿಗಳಲ್ಲಿ ಪ್ರೊ. ಎಸ್.ಕೆ. ರಾಮಚಂದ್ರರಾವ್, ಎನ್.ಟಿ. ಶ್ರೀನಿವಾಸ ಅಯ್ಯಂಗಾರ್, ಪ್ರೊ. ಟಿ.ವಿ. ವೆಂಕಟಾಚಲ ಶಾಸ್ತ್ರಿ, ಟಿ. ಕೇಶವಭಟ್ಟ, ಜಿ. ಚೆನ್ನವೀರಸ್ವಾಮಿ, ಎಚ್.ಆರ್. ಕೇಶವಮೂರ್ತಿ, ಮಾರ್ಕಾಂಡೇಯ ಅವಧಾನಿ ಭಾಗವಹಿಸಿದ್ದರು.